# ಅಂತರರಾಷ್ಟ್ರೀಯ ಕಿವುಡ

# ಸಿನಿಮೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಣ್ಣು, ಕಿವಿ ಸರಿಯಿರುವ ವ್ಯಕ್ತಿಗಳು ನಿರ್ಮಿಸಿರುವ ಸಿನಿಮಾಗಳನ್ನು ನೋಡಿದ್ದೀರಿ. ಅದೇ ಕಿವುಡ ವ್ಯಕ್ತಿಯೊಬ್ಬರು ಸನ್ನೆ ಭಾಷೆಯಲ್ಲಿ ಮಾಡಿದ ಸಿನಿಮಾವನ್ನು ಎಂದಾದರೂ ನೋಡಿದ್ದೀರಾ?

ನಾಲ್ಕನೇ ಅಂತರರಾಷ್ಟ್ರೀಯ ಕಿವುಡ ಸಿನಿಮೋತ್ಸವದ ಉದ್ಘಾಟನೆಯಲ್ಲಿ ಸಂಸ್ಥಾಪಕ ಕೆ.ಮುರಳಿ ಪ್ರೇಕ್ಷಕರಿಗೆ ಕೇಳಿದ ಪ್ರಶ್ನೆ ಇದು. ನಂತರ ಮಾತನಾಡಿದ ಅವರು, 'ಬುಧವಾರ ಪ್ರಾರಂಭವಾದ ಮೂರು ದಿನಗಳ ಈ ಉತ್ಸವದಲ್ಲಿ ಕಿವುಡರೇ ರೂಪಿಸಿದ 35 ಅಂತರ ರಾಷ್ಟ್ರೀಯ ಹಾಗೂ ರಾಷ್ಟ್ರೀಯ ವಿವಿಧ ಪ್ರಕಾರದ ಸಿನಿಮಾ ಪ್ರದರ್ಶನವಾಗಲಿದೆ. ಈ ಬಾರಿ ಕಿವಿ ಕೇಳುವವರು ನಿರ್ಮಿಸಿದ ಮೂಕಿ ಚಿತ್ರವನ್ನೂ ಪ್ರದರ್ಶನಕ್ಕೆ ಆಯ್ಕೆ ಮಾಡಲಾಗಿದೆ' ಎಂದರು.

'ನಾವು ಸಹ ಎಲ್ಲರಂತೆ ಸಿನಿಮಾಗಳನ್ನು ಮಾಡಬಹುದು. ಆ ಸಾಮರ್ಥ್ಯ ನಮ್ಮಲ್ಲಿ ಇದೆ. ಸಾಮಾನ್ಯ ನಿರ್ದೇಶಕರಂತೆ ನಾವು ಸಹ ಸಿನಿಮಾ ನಿರ್ಮಿಸಿ ಲಾಭ ಪಡೆಯಬಹುದು. ಅದಕ್ಕೆ ಈ ಸಿನಿಮೋತ್ಸವವೇ ಸಾಕ್ಷಿ' ಎಂದು ಹೇಳಿದರು.

ಕೇಂದ್ರ ಸರ್ಕಾರದ ಚಿತ್ರೋತ್ಸವ ನಿರ್ದೇಶನಾಲಯ ನಿರ್ದೇಶಕ ಸೆಂಥಿಲ್ ರಾಜನ್ ಅವರು ಕಿವುಡ ಪ್ರತಿಷ್ಠಾನದ



ಸ್ವಿಟ್ಜರ್ಲೆಂಡ್‌ನ ಚಾರಿಟಿ ವರ್ಕ್‌ನ ಸಿಇಒ ಶಕೀಲಾ ಲೀಯ್ಯೂನ್‌ಬರ್ಗರ್ ಅವರು ಕಿವುಡ ಪ್ರತಿಷ್ಠಾನದ ನಿರ್ದೇಶಕ ಕೆ. ಮುರಳಿ ಅವರೊಂದಿಗೆ ಸನ್ನೆ ಭಾಷೆಯಲ್ಲಿ ಚರ್ಚಿಸಿದರು. ಡಿ.ಎಸ್‌ ರಾಣಾ, ಹಾಂಕಾಂಗ್ ಸಿನಿಮಾ ಮತ್ತು ನಾಟಕ ಸಂಸ್ಥೆ ನಿರ್ದೇಶಕ ಮಾರ್ಕ್ ಚ್ಯೂ ಯು ಇದ್ದರು —ಪ್ರಜಾವಾಣಿ ಚಿತ್ರ

ರೀತಿ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಆಯೋಜಿಸುವುದಾದರೆ ಸರ್ಕಾರದ ಸಹಕಾರ ಇರುತ್ತದೆ. ನಮ್ಮ ಚಲನಚಿತ್ರೋತ್ಸವದಲ್ಲೂ ಕಿವುಡರ ಸಿನಿಮಾಗಳನ್ನು ಪ್ರದರ್ಶಿಸುತ್ತೇವೆ. ಆಗ ಅದು ಹೆಚ್ಚು ಜನರಿಗೆ ತಲುಪುತ್ತದೆ'

ಕಿವುಡ ವ್ಯಕ್ತಿಗಳು ಅನುಭವಿಸುವ ತೊಂದರೆಗಳು, ಎಲ್ಲರೊಂದಿಗೆ ಒಳಗೊಳ್ಳಲು ಸಾಧ್ಯವಾಗದ ಸಂದರ್ಭಗಳನ್ನು ಈ ಸಿನಿಮಾಗಳಲ್ಲಿ ಕಾಣಬಹುದು. ಬ್ರಿಟನ್, ಹಾಂಕಾಂಗ್, ಇಟಲಿ, ಶ್ರೀಲಂಕಾ ಮತ್ತು ಭಾರತದ ವಿವಿಧ ಭಾಗಗಳ ಜನರು ಈ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.

# ಮೊಟ್ಟೆ ಶೇಖರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಇಎಸ್ ಕಾಲೇಜು ಸಮೀಪದ ವಾಟರ್ ಟ್ಯಾಂಕ್ ಪಾರ್ಕ್ ಬಳಿ ನಡೆದಿದ್ದ ಡಿಪ್ಲೊಮಾ ವಿದ್ಯಾರ್ಥಿ ಹರ್ಷ ಕೊಲೆ ಪ್ರಕರಣದ ಪ್ರಮುಖ ಆರೋಪಿ ಶೇಖರ್ ಅಲಿಯಾಸ್ ಮೊಟ್ಟೆ (23) ಬನಶಂಕರಿ ಬಸ್ ನಿಲ್ದಾಣದಲ್ಲಿ ಪೊಲೀಸರ ಬಲೆಗೆ ಬಿದ್ದಿದ್ದಾನೆ.

ಇನ್ನು ಶೇಖರ್‌ನ ಸಹಚರ ಮಹೇಶ, ನಗರದ ಎಸಿಎಂಎಂ ನ್ಯಾಯಾಲಯಕ್ಕೆ ಶರಣಾಗಿದ್ದಾನೆ. ಈ ಮೂಲಕ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಎಂಟಕ್ಕೆ ಏರಿಕೆಯಾಗಿದೆ. ಇನ್ನೊಬ್ಬ ಆರೋಪಿ ಮಂಜುನಾಥ ತಲೆಮರೆಸಿಕೊಂಡಿದ್ದಾನೆ.

ಮೃತ ಹರ್ಷ ಹಾಗೂ ಸ್ನೇಹಿತರು, ಆರೋಪಿಗಳ ಜತೆ ಪ್ರತಿ ಭಾನುವಾರ ಶ್ರೀನಗರ ಬಸ್ ನಿಲ್ದಾಣದ ಪಕ್ಕದಲ್ಲಿರುವ 'ವಿಜಯ ಮೈದಾನ'ದಲ್ಲಿ ಒಟ್ಟಿಗೇ ಕ್ರಿಕೆಟ್ ಆಡುತ್ತಿದ್ದರು. ಹೀಗಾಗಿ ಪರಸ್ಪರರ ನಡುವೆ ಪರಿಚಯವಿತ್ತು.

ಡಿಸೆಂಬರ್‌19ರ ರಾತ್ರಿ ₹5 ಸಾವಿರ ಮೌಲ್ಯದ ಮೊಬೈಲ್ ವಿಚಾರಕ್ಕೆ ಜಗಳವಾಗಿ, ಹರ್ಷ ಹಾಗೂ ಸ್ನೇಹಿತರು, ಶೇಖರನ ಮೇಲೆ ಹಲ್ಲೆ ನಡೆಸಿದ್ದರು.

ಇದಕ್ಕೆ ಪ್ರತೀಕಾರವಾಗಿ ಶೇಖರ್ ಹಾಗೂ ಆತನ ಎಂಟು ಮಂದಿಯ ಗ್ಯಾಂಗ್, ಡಿ.20ರ ಮಧ್ಯಾಹ್ನ ಪಿಇಎಸ್ ಕಾಲೇಜು ಬಳಿ ಹರ್ಷ ಅವರನ್ನು ಚಾಕುವಿನಿಂದ ಇರಿದು ಕೊಲೆಗೈದಿತ್ತು. ಈ ಸಂಬಂಧ ಪೊಲೀಸರು ಮೂವರು ಬಾಲಕರು ಸೇರಿದಂತೆ ಆರು ಮಂದಿಯನ್ನು ಘಟನೆ ನಡೆದ ಮರುದಿನವೇ ಬಂಧಿಸಿದ್ದರು.

'ಎಸ್ಸೆಸ್ಸೆಲ್ಸಿ ಓದಿರುವ ಶೇಖರ್, ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ. ಡಕಾಯಿತಿಗೆ ಸಂಚು ರೂಪಿಸಿದ ಆರೋಪದಡಿ ಆತನ ವಿರುದ್ಧ ನಮ್ಮ ಠಾಣೆಯಲ್ಲೇ ಮೂರು ಪ್ರಕರಣಗಳು ದಾಖಲಾಗಿವೆ.

ಹತ್ಯೆ ನಂತರ ತಿರುಪತಿಗೆ ತೆರಳಿದ್ದ ಆತ, ಡಿ.25ರಂದು ಬನಶಂಕರಿಗೆ ಬಂದಿದ್ದ. ಈ ಬಗ್ಗೆ ನಮ್ಮ ಬಾತ್ಮೀದಾರರೊಬ್ಬರು ಸುಳಿವು ನೀಡಿದರು. ಮಫ್ತಿಯಲ್ಲಿ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಯಿತು' ಎಂದು ಹನುಮಂತನಗರ ಪೊಲೀಸರು ತಿಳಿಸಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್
ವಿ.ಎಸ್.ಉಗ್ರಪ್ಪ
ವಿರುದ್ಧ ದೂ
ಪೊಲೀಸರು ಎಫ್
ಎಂದು ಆರೋಪಿ
ಮಠದ ಭಕ್ತರು
ಎದುರು ಬು
ನಡೆಸಿದರು.
ಹೊಸನಗರ
ಭಕ್ತರು ಠಾಣೆ
ತಪ್ಪಿತಸ್ಥರ ವಿರು
ಒತ್ತಾಯಿಸಿದರ
'ಉಗ್ರಪ್ಪ,
ರವಿಕುಮಾರ್
ಹರೀಶ್ ಅ
ಮಠದ ಅ
ನೀಡಿದೆ.
ವಿರುದ್ಧ
ದಾಖಲಿ
ಪ್ರತಿಭಟ
'ರ
ಬಗ್ಗೆ
ಹೇ

# ಗ್ರಾಮ ಪಂಚಾಯಿತಿ ಸದಸ್ಯರಲ್ಲಿ ಭಿನ್ನಾಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಜಾಪುರ ರಸ್ತೆಯ ದೊಮ್ಮಸಂದ್ರ ಗ್ರಾಮದಲ್ಲಿ ಕೋತಿ ಹಾವಳಿ ಹಾಗೂ ಬೀದಿನಾಯಿಗಳ

ಆಗಿಲ್ಲ. ಸಾವಿರಾರು ರೂಪಾಯಿ ಖರ್ಚು ಮಾಡಿ ಇವುಗಳನ್ನು ಹಿಡಿಯುವ ಅಗತ್ಯ ಇಲ್ಲ. ಇದರಿಂದ ಯಾವ ಪ್ರಯೋಜನವೂ ಇಲ್ಲ. ಈ ಪ್ರಾಣಿಗಳನ್ನು ಅವುಗಳ ಪಾಡಿಗೆ ಬಿಡುವುದು ಒಳ್ಳೆಯದು' ಎಂದು ಸಲಹೆ ನೀಡಿದರು. ಇದಕ್ಕೆ